**<u>ಸಾಕ್ಷಿಯನ್ನು ದಿನಾಂಕ *10.12.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ *1* ನೇ ಆರೋಪಿ ಪರ ಶ್ರೀ ಸಿ.ಎಂ.ಜೆ. ವಕೀಲರಿಂದಃ</u>**

ನಾನು 2020 ನೇ ಇಸವಿಯಲ್ಲಿ ಮೈಸೂರಿನ ಮಹಾಜನ ಕಾಲೇಜಿನಲ್ಲಿ ಮೊದಲನೇ ವರ್ಷದ ಕಾನೂನು ವಿದ್ಯಾಭ್ಯಾಸ ಮಾಡುತ್ತಿದ್ದೆ. ಸರಸ್ವತಿಪುರಂ ಪೊಲೀಸ್ ಠಾಣೆಯ ಹತ್ತಿರ ಯಾವುದೇ ಮನೆಗಳು ಇರುವುದಿಲ್ಲ. ಮೊದಲು ನನಗೆ ಸರಸ್ವತಿಪುರಂ ಪೊಲೀಸರು ಪರಿಚಯ ಇರಲಿಲ್ಲ. ದಿನಾಂಕ 27.10.2020 ರಂದು ನಾನು ಸರಸ್ವತಿಪುರಂ ಪೊಲೀಸ್ ಠಾಣೆಯ ಮುಂದೆ ನಿಂತಿರಲಿಲ್ಲ ಎಂದರೆ ಸರಿ. ನಾನು ದಿನಾಂಕ 25.10.2020 ರಂದು ಸರಸ್ವತಿಪುರಂ ಪೊಲೀಸ್ ಠಾಣೆಯ ಹತ್ತಿರ ಹೋಗಿದ್ದೆ. ನನಗೆ ಆ ದಿನ ಪೊಲೀಸ್ ಠಾಣೆಯಲ್ಲಿ ಕೆಲಸ ಇರಲಿಲ್ಲ. ನನ್ನ ಸ್ನೇಹಿತನಿಗೂ ಆ ದಿನ ಪೊಲೀಸ್ ಠಾಣೆಯಲ್ಲಿ ಕೆಲಸ ಇರಲಿಲ್ಲ. ನಮ್ಮ ಕಾಲೇಜು ಬೆಳಗ್ಗೆ 9.30 ಗಂಟೆಗೆ ಪ್ರಾರಂಭ ಆಗುತ್ತದೆ ಎಂದರೆ ಸರಿ. ನಾನು ದಿನಾಂಕ 25.10.2020 ರಂದು ಕಾಲೇಜಿಗೆ ಹೋಗಿರಲಿಲ್ಲ. ನಾನು ಹೋದ ದಿವಸ ಪೊಲೀಸ್ ಠಾಣೆಯಲ್ಲಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿತ್ತು. ಪೊಲೀಸ್ ಠಾಣೆಯಲ್ಲಿ ಆರೋಪಿತರೆಲ್ಲರೂ ಇದ್ದರು. ಪೊಲೀಸ್ ಠಾಣೆಯಲ್ಲಿ ಆರೋಪಿತರೆಲ್ಲರೂ ಎಷ್ಟು ದಿವಸಗಳಿಂದ ಇದ್ದರು ಎಂದು ಗೊತ್ತಿರಲಿಲ್ಲ. ಪೊಲೀಸರು ಆ ದಿನ ನನ್ನನ್ನು ಯಾವ ಯಾವ ಸ್ಥಳ ಕ್ಕೆ ಕರೆದುಕೊಂಡು ಹೋಗುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ. ನಾನು ಪುನಃ ಹೇಳುವುದೇನೆಂದರೆ ಯಾವ ಯಾವ ಸ್ಥಳ ಗಳಿಗೆ ಕರೆದುಕೊಂಡು ಹೋಗುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿತ್ತು. ಪೊಲೀಸರು ನನ್ನನ್ನು ಇಂತಹ ಸ್ಥಳ ಗಳಿಗೆ ಕರೆದುಕೊಂಡು

ಹೋಗುತ್ತೇವೆ ಎಂದು ಹೇಳಿರಲಿಲ್ಲ. ನಾನು ಮೊದಲು ಬುಗತಗಳ್ಳಿ ಗ್ರಾಮವನ್ನು ನೋಡಿರಲಿಲ್ಲ. ಆ ದಿವಸ ನಾವು ಮನೆಗೆ ಹೋಗಿದ್ದೆವು ಎಂದು ಹೇಳುವ ಮನೆ ಯಾರ ಮನೆ ಎಂದು ನನಗೆ ವಯಕ್ತಿಕವಾಗಿ ಗೊತ್ತಿರಲಿಲ್ಲ. ಆ ಮನೆಯ ಆಜುಬಾಜು ಯಾರ ಮನೆ ಇರುತ್ತವೆ ಎಂದು ನನಗೆ ಗೊತ್ತಿರಲಿಲ್ಲ. ಬುಗತಗಳ್ಳಿ ಗ್ರಾಮದ ಯಾವ ಬೀದಿಯಲ್ಲಿ ಆ ಮನೆ ಇತ್ತು ಎಂದು ಹೇಳಲು ಆಗುವುದಿಲ್ಲ ಆದರೆ ಬಸ್ ನಿಲ್ದಾಣದ ಹತ್ತಿರ ಒಬ್ಬ ಆರೋಪಿಯ ಮನೆ ಮತ್ತು ಇನ್ನೊಬ್ಬ ಆರೋಪಿಯ ಮನೆ ಬೇತಾಳೇಶ್ವರ ದೇವಸ್ಥಾನದ ಹತ್ತಿರ ಇತ್ತು. ಬಸ್ ನಿಲ್ದಾಣದ ಹತ್ತಿರ ಇದ್ದಂತಹ ಮನೆ ಆರೋಪಿ ನಾಗೇಶ್ ರವರದು ಇತ್ತು. ಬೇತಾಳೇಶ್ವರ ದೇವಸ್ಥಾನದ ಹತ್ತಿರ ಇದ್ದಂತಹ ಮನೆ ಆರೋಪಿ ನಿರಂಜನ್ ರವರದು ಇತ್ತು. ನಾನು 2 ಮನೆಯ ಒಳಗಡೆ ಹೋಗಿದ್ದೆ. ಆ ಮನೆಗಳಲ್ಲಿ ಯಾರೆಲ್ಲಾ ವಾಸವಾಗಿದ್ದರು ಅಂತ ನನಗೆ ಹೇಳಲು ಆಗುವುದಿಲ್ಲ. ಆ ಮನೆಗಳಲ್ಲಿ ನಾವುಗಳು ಹೋದಾಗ ಬೇರೆಯವರು ಇದ್ದರು. ಮನೆಗಳಲ್ಲಿ ಇದ್ದಂತಹವರುಗಳನ್ನು ಕಬೋರ್ಡ್ ನಲ್ಲಿ ಇದ್ದಂತಹ ಹಣ ಯಾರದು ಅಂತ ಕೇಳಿರಲಿಲ್ಲ. ಆ ಮನೆಗಳಲ್ಲಿ ಎಷ್ಟು ಜನ ವಾಸವಾಗಿರುತ್ತಾರೆ ಅಂತ ಅವರನ್ನು ಕೇಳಿ ಪೊಲೀಸರು ತಿಳಿದುಕೊಂಡರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ವಾರ್ಡ್ ರೋಬ್ ಗಳನ್ನು ಯಾರೆಲ್ಲಾ ಉಪಯೋಗಿಸುತ್ತಿದ್ದರು ಎನ್ನುವ ಬಗ್ಗೆ ಪೊಲೀಸರು ವಿಚಾರಣೆ ಮಾಡಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಹಜರ್ ಗಳನ್ನು ಯಾರು ಬರೆದಿದ್ದರು ಅಂತ ನನಗೆ ಹೇಳಲು ಆಗುವುದಿಲ್ಲ. ಮಹಜರ್ ನಲ್ಲಿ ಇರುವಂತಹ ಒಕ್ಕಣಿಕೆಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ಪೊಲೀಸರು ಆ ಮನೆಗಳ  ಆಜಬಾಜುನವರನ್ನು ಕರೆದು ಮಹಜರ್ ಗೆ ಸಹಿ ತೆಗೆದುಕೊಂಡಿರಲಿಲ್ಲ. ರೂ. 30,000/- ಹಣ ಮತ್ತು ರೂ.25,000/- ಹಣವನ್ನು ಯಾವ ಪೊಲೀಸರ ಕೈಗೆ ಕೊಟ್ಟಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಆ

ಹಣವನ್ನು ಎಣಿಕೆ ಮಾಡಿರಲಿಲ್ಲ. ಆ ಎಣಿಕೆ ಮಾಡುವ ಸಂದರ್ಭದಲ್ಲಿ ಯಾವಯಾವ ನೋಟುಗಳ ಎಷ್ಟು ಎಷ್ಟು ಹಣ ಎಂದು ನಾನು ಬರೆದುಕೊಂಡಿರುವುದಿಲ್ಲ. ಪೊಲೀಸರು ಮನೆಗಳ ಒಳಗಡೆ ಹೋಗುವ ಪೂರ್ವದಲ್ಲಿ ತಮ್ಮಗಳ ಮತ್ತು ನನ್ನ ಸರ್ಚ್ ಗಳು ನಡೆದಿರಲಿಲ್ಲ. ನಾನು ವಿವೋ ಮೊಬೈಲ್ ಅನ್ನು ಕೈಗೆ ತೆಗೆದುಕೊಂಡು ಪರಿಶೀಲನೆ ಮಾಡಿರಲಿಲ್ಲ. ಆ ವಿವೋ ಮೊಬೈಲ್ ಯಾವ ಮಾಡೆಲ್ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಆ ಮೊಬೈಲ್ ನಲ್ಲಿ ಏನೇನು ಕಾಲ್ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಆರೋಪಿ ನಾಗೇಶ್ ಮತ್ತು ನಿರಂಜನ್ ರವರನ್ನು ಪೊಲೀಸ್ ಠಾಣೆಯಲ್ಲಿ ನೋಡಿದ್ದೆ ಅವರು ನಮ್ಮನ್ನು ಬುಗತಗಳ್ಳಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು ಅವರ ಮನೆಗಳ ಕಬೋರ್ಡ್ ನಲ್ಲಿ ಇದ್ದಂತಹ ಹಣವನ್ನು ತೆಗೆದುಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಮೊದಲು ಅರುಣೋದಯ ವಿದ್ಯಾಸಂಸ್ಥೆ ಬಗ್ಗೆ ಗೊತ್ತಿರಲಿಲ್ಲ. ಅರುಣೋದಯ ಸಂಸ್ಥೆಯ ಪಕ್ಕದಲ್ಲಿರುವ ಜಮಿನು ಯಾರಿಗೆ ಸೇರಿತ್ತು ಎಂದು ಗೊತ್ತಿರುವುದಿಲ್ಲ ಆದರೆ ಮಹದೇವಸ್ವಾಮಿಗೆ ಸೇರಿತ್ತು ಎಂದು ಅಲ್ಲಿ ಹೇಳುತ್ತಿದ್ದರು. ಅರುಣೋದಯ ವಿದ್ಯಾಸಂಸ್ಥೆಯ ಆಜುಬಾಜು ಜಮೀನುಗಳು ಇರುತ್ತವೆ ಎಂದರೆ ಸರಿ. 1 ನೇ ಆರೋಪಿ ತೋರಿಸಿದ ಜಮೀನಿನಲ್ಲಿ ಟಮೋಟೋ ಬೆಳೆದಿತ್ತು. ಗುತ್ತಿಗೆ ಸಂಬಂಧ ಪೊಲೀಸರು ಆ ವೇಳೆಯಲ್ಲಿ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿರಲಿಲ್ಲ. ಆ ಜಮೀನಿನ ಮಾಲೀಕರನ್ನು ಕರೆಸಿರಲಿಲ್ಲ. ನನಗೆ ಯಾವುದೇ ವಿಷಯ ಗೊತ್ತಿರುವುದಿಲ್ಲ ಮತ್ತು ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಪೊಲೀಸರು ಹೇಳಿದ್ದರ ಮೇರೆಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ *3* ಮತ್ತು *4* ನೇ ಆರೋಪಿ ಪರ ವಕೀಲರಿಂದಃ</u>**

ಸಂಚನ್ನು ರೂಪಿಸಿ ರೂ. 7,00,000/- ರೂಪಾಯಿಗೆ ಮಾತುಕತೆ ಆಗಿತ್ತು ಎನ್ನುವ ವಿಷಯವನ್ನು ಪಂಚನಾಮೆಯಲ್ಲಿ ಬರೆದಿರುತ್ತಾರೆ. ನಾನು ಈಗಲೂ ವಿದಾರ್ಥಿ ಇರುತ್ತೇನೆ. ನಾನು ಈ ಹಿಂದೆ ಯಾವುದೇ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿರುವುದಿಲ್ಲ. ನಾನು ಸಾಮಜಿಕ ಕಾರ್ಯಕರ್ತ ಇರುತ್ತೇನೆ. ನಾನು ಆಗಾಗ್ಗೆ ಹೋರಾಟಗಳಲ್ಲಿ ಭಾಗಿಯಾಗುತ್ತೇನೆ ಎಂದರೆ ನ್ಯಾಯದ ಪರವಾಗಿ ಇದ್ದರೆ ಹೋರಾಡುತ್ತೇನೆ. ನಾನು ಮಹಜರ್ ಗಳ ಪ್ರತಿ ಪುಟಗಳಿಗೆ ಸಹಿ ಮಾಡಿರುವುದಿಲ್ಲ. ನಿಪಿ-159 ರ ಪುಟ ಸಂಖ್ಯೆ 3 ರಲ್ಲಿ 11 ನೇ ಸಾಲಿನಲ್ಲಿ ಏನನ್ನು ಬರೆಯದೇ ಸ್ವಲ್ಪ ಜಾಗವನ್ನು ಖಾಲಿ ಬಿಟ್ಟಿರುತ್ತಾರೆ ಎಂದರೆ ಸರಿ. ನಾನು ಹೋಗಿದ್ದೆ ಎಂದು ಹೇಳುವ ವಿದ್ಯಾಸಂಸ್ಥೆಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಮುಖ್ಯೋಪಾದ್ಯಾಯರು ಆ ಸಂಸ್ಥೆಯಲ್ಲಿ ನಾವು ಹೋದಾಗ ಇರಲಿಲ್ಲ. ಮುಖ್ಯಸ್ಥರು ಇದ್ದರು. ವಿದ್ಯಾಸಂಸ್ಥೆ ಯಲ್ಲಿ ಮಹಜರ್ ಮಾಡಿದಾಗ ವಿದ್ಯಾರ್ಥಿಗಳು ಇರಲಿಲ್ಲ ಮತ್ತು ಶಾಲೆ ನಡೆಯುತ್ತಿರಲಿಲ್ಲ. ಅಂದು ಯಾವ ದಿವಸ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಅರುಣೋದಯ ಸಂಸ್ಥೆಯಲ್ಲಿ ಕೆಲಸ ಮಾಡುವವರು ಇದ್ದರೋ ಅಥವಾ ಇಲ್ಲವೋ ಎಂದು ನಾನು ನೋಡಲಿಲ್ಲ. ಅರುಣೋದಯ ಸಂಸ್ಥೆಯಲ್ಲಿ ಸಿಸಿಟಿವಿ ಇದ್ದ ಬಗ್ಗೆ ನಾನು ನೋಡಿರಲಿಲ್ಲ. ನಾನು ಮಹಜರ್ ಮಾಡಿದ್ದರು ಎಂದು ಹೇಳುವ ಸಂದರ್ಭದಲ್ಲಿ ನಾನು ಹಾಜರಿರಲಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರ್ ಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಅರುಣೋದಯ ಸಂಸ್ಥೆಗೆ ಹೋದಾಗ ಶಾಲೆಯ ಕೊಠಡಿಗಳಿಗೆ ಬೀಗ ಹಾಕಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಮಾಡಿದ್ದರು ಎಂದು

ಹೇಳುವ ಸಂದರ್ಭದಲ್ಲಿ ಅರುಣೋದಯ ಸಂಸ್ಥೆಯ ಬೇರೆ ಯಾರಾದರು ಹಾಜರು ಇದ್ದರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿರಲಿಲ್ಲ. ರಸ್ತೆಯಿಂದ 25-30 ಅಡಿ ಅಂತರದಲ್ಲಿ ಪೌಲ್ಟ್ರಿ ಫಾರಂ ಇತ್ತು. ಪೌಲ್ಟ್ರಿ ಫಾರಂ ನಡೆಯುತ್ತಿತ್ತೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಸಹ ಹತ್ತಿರಕ್ಕೆ ಹೋಗಿ ಕೋಳಿ ಸಾಕಾಣಿಕೆ ನಡೆಯುತ್ತಿದೆಯೋ ಅಥವಾ ಬೇರೆ ಯಾರಾದರೂ ಇದ್ದರೋ ಎಂದು ನನಗೆ ಗೊತ್ತಿಲ್ಲ. ಪರಶಿವಮೂರ್ತಿ ಅವರ ಸ್ನೇಹಿತರ ಜೊತೆಯಲ್ಲಿ ಬರುತ್ತಿರುವಾಗ ಎಂದು ಹೇಳಿದ್ದು ಅವರ ಸ್ನೇಹಿತರ ಹೆಸರು ನನಗೆ ಗೊತ್ತಿರುವುದಿಲ್ಲ. ಪೊಲೀಸರು ಪರಶಿವಮೂರ್ತಿ ಯ ಸ್ನೇಹಿತರ ಬಗ್ಗೆ ವಿಚಾರಣ ಮಾಡಿರಲಿಲ್ಲ. ಪೊಲೀಸರು ಪಂಚನಾಮೆಯಲ್ಲಿ ಪರಶಿವಮೂರ್ತಿ ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಹೋಗುತ್ತಿದ್ದರು ಎಂದು ಬರೆದಿರುವುದಿಲ್ಲ ಆದರೆ ದೇವಲಾಪುರದಿಂದ ನರಸೀಪುರದ ಮುಖ್ಯ ರಸ್ತೆ ಕಡೆಗೆ ಹೋಗುತ್ತಿದ್ದರು ಎಂದು ಬರೆದಿರುತ್ತದೆ.

ದೇವಲಾಪುರದಿಂದ ವೆಂಕಟೇಶ್ವರ ಪೌಲ್ಟ್ರಿ ಫಾರಂ ಗೆ ಎಷ್ಟು ಅಂತರ ಎಂದು ನನಗೆ ಗೊತ್ತಿರುವುದಿಲ್ಲ. ಪರಶಿವಮೂರ್ತಿ ರವರನ್ನು ಯಾವುದೋ ಸ್ಥಳ ಕ್ಕೆ ಕರೆದುಕೊಂಡು ಹೋಗಿ ಅಪಘಾತ ಮಾಡಿ ಕೊಲೆ ಮಾಡಿ ಪ್ರಯತ್ನ ಪಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಯಾವುದೇ ಸ್ಥಳ ಗಳಿಗೆ ಕರೆದುಕೊಂಡು ಹೋಗಿಲ್ಲ ಆ ಸ್ಥಳ ಗಳಲ್ಲಿ ಮಹಜರ್ ಮಾಡಿಲ್ಲ ನಾನು ಪೊಲೀಸ್ ಠಾಣೆಯಲ್ಲಿಯೇ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಫೋಟೋಗಳಲ್ಲಿ ಇರುತ್ತೇನೆ ಎಂದು ಹೇಳುವ ಫೋಟೋಗಳನ್ನು ನಾನು ಹೇಳಿದಂತಹ ಸ್ಥಳ ಗಳಲ್ಲಿ ತೆಗೆದಿರುವುದಿಲ್ಲ ಅವುಗಳನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿರುವಂತಹ ಫೋಟೋಗಳು ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಮತ್ತು ಪೊಲೀಸರನ್ನು

ಕರೆದುಕೊಂಡು ಹೋಗಿ ಸ್ಥಳ ಗಳನ್ನು ತೋರಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಆರೋಪಿತರನ್ನು ವಿಚಾರಣೆ ಮಾಡಿ ಬರೆದುಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಆರೋಪಿತರನ್ನು ವಿಚಾರಣೆ ಮಾಡಿ ಬರವಣಿಗೆ ಮಾಡಿರಲಿಲ್ಲ. ಒಂದು ಬೈಕ್ ಅನ್ನು ಬಾಡಿಗೆ ಕರಾರನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ *2* ಮತ್ತು *5* ನೇ ಆರೋಪಿ ಪರ ವಕೀಲರಿಂದಃ**

2 ಮತ್ತು 5 ನೇ ಆರೋಪಿ ಪರ ವಕೀಲರು ಹಾಜರಿದ್ದು ಆರೋಪಿ 1, 3 ಮತ್ತು 4 ಪರ ವಕೀಲರ ಮಾಡಿದಂತಹ ಪಾಟೀ ಸವಾಲಿನಂತೆಯೇ ತಮ್ಮ ಪಾಟೀ ಸವಾಲು ಇರುತ್ತದೆ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**